ದಿನಾಂಕಃ 23.02.2024 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣವಚನ ಬೋಧಿಸಲಾಯಿತು.

**ಪಾಟೀ ಸವಾಲುಃ 4 ಮತ್ತು 5 ನೇ ಪ್ರತಿವಾದಿ ಪರ ಶ್ರೀ ಎಲ್ ಎಸ್ ವಕೀಲರಿಂದಃ**

ನಾನು 10 ನೇ ತರಗತಿಯವರೆಗೆ ಓದಿರುತ್ತೇನೆ . ನನಗೆ ಕನ್ನಡ ಮತ್ತು ಇಂಗ್ಲೀಷ್ ಭಾಷೆಗಳು ಓದಲು ಮತ್ತು ಬರೆಯಲು ಬರುತ್ತದೆ . ನಾನು ಕನ್ ಸ್ಟ್ರಕ್ಷನ್ ಕೆಲಸ ವನ್ನು ಕಳೆದ 3 ವರ್ಷಗಳಿಂದ ಮಾಡುತ್ತಿದ್ದೇನೆ . ಅದಕ್ಕೂ ಮುಂಚೆ ಪ್ರಿಟಿಂಗ್ ಪ್ರೆಸ್ ಕೆಲಸ ಮಾಡುತ್ತಿದ್ದೆ. ನಾನು ಪ್ರಕರಣ ದಾಖಲಿಸುವ ಕಾಲಕ್ಕೆ ಚನ್ನಮ್ಮನಕೆರೆ, ತ್ಯಾಗರಾಜನಗರದಲ್ಲಿ ವಾಸವಿದ್ದೆನು . ನೀವು ಪ್ರಕರಣ ದಾಖಲಿಸುವ ಕಾಲಕ್ಕೆ ವಿಳಾಸವನ್ನು ಚನ್ನಮ್ಮ ಲೇ ಔಟ್ , ನಿಯರ್ ಎಸ್ ಎಸ್ ಎಂ ಎಂದು ನೀಡಿದ್ದೀರಿ ಎಂದರೆ ಸರಿ . ಚನ್ನಮ್ಮನ ಕೆರೆ ಅಚ್ಚುಕಟ್ಟು ಮತ್ತು ಚನ್ನಮ್ಮ ಲೇ ಔಟ್ ಎರಡು ಬೇರೆ ಬೇರೆ ಏರಿಯಾಗಳು ಎಂದರೆ ಹಿಂದೆ ಚನ್ನಮ್ಮನ ಕೆರೆ ಎಂದು ಇತ್ತು ಅದನ್ನು ಈಗ ಚನ್ನಮ್ಮ ಲೌೀ ಔಟ್ ಎಂದು ಮಾಡಿದ್ದರು . ಚನ್ನಮ್ಮನ ಕೆರೆ ಅಚ್ಚುಕಟ್ಟು ಮತ್ತು ಚನ್ನಮ್ಮನ ಲೇ ಔಟ್ ಎರಡು ಬೇರೆ ಬೇರೆ ಹಿಂದಿನಿಂದಲೂ ಎರಡು ಏರಿಯಾಗಳು ಇದ್ದವು ಎಂದರೆ ಸರಿ . ನೀವು ಉದ್ದೇಶಪೂರ್ವಕವಾಗಿ ಈ ದಾವೆಯನ್ನು ದಾಖಲಿಸುವ ಕಾಲಕ್ಕೆ ಸುಳ್ಳು ವಿಳಾಸವನ್ನು ನೀಡಿದ್ದೀರಿ ಎಂದರೆ ಸರಿಯಲ್ಲ. ಸರಿಯಾದ ವಿಳಾಸವನ್ನೆ ನೀಡಿದ್ದೇನೆ .

ನಾನಿರುವ ಸ್ಥಳಕ್ಕೂ ದಾವಾ ಸ್ವತ್ತಿಗೂ ಸುಮಾರು 3 ಕಿ ಮೀ ನಷ್ಟು ಅಂತರವಿದೆ . ನಾನು ದಾವಾ ಸ್ವತ್ತನ್ನು

ಮೊದಲ ಬಾರಿಗೆ 1985 ನೇ ಇಸವಿಯಲ್ಲಿ ನೋಡಿದ್ದೆ . ಆ ಕಾಲಕ್ಕೆ ದಾವಾ ಸ್ವತ್ತು ಏನಾಗಿತ್ತು ಎಂದರೆ ಖಾಲಿ ಸೈಟ್ ಇತ್ತು . ನಿಮ್ಮ ಹುಟ್ಟಿದ ದಿನಾಂಕ ಹೇಳಲಾಗುವುದೇ ಎಂದರೆ 15.02.1982 ಆಗಿರುತ್ತದೆ . ನಿಮ್ಮ ಹುಟ್ಟಿದ ದಿನಾಂಕದ ಪ್ರಕಾರ 1985 ಕ್ಕೆ ನಿಮಗೆ 3 ವರ್ಷ ಎಂದರೆ ಸರಿ. ಹಾಗಾಗಿ ನೀವು ಖುದ್ದಾಗಿ ಹೋಗಿ ದಾವಾ ಸ್ವತ್ತು ನೋಡಿಲ್ಲ , ನೀವು 3 ವರ್ಷದ ಮಗುವಾಗಿದ್ದೀರಿ ಎಂದರೆ ಆ ಕಾಲಕ್ಕೆ ತೆಗೆದುಕೊಂಡಿದ್ದೆ ಎಂದು ಹೇಳಿದ್ದರು ಹಾಗಾಗಿ ಗೊತ್ತು . ಆ ರೀತಿ ಯಾವಾಗ ಗೊತ್ತಾಯಿತು ಎಂದರೆ ನನಗೆ 30 ವರ್ಷ ವಯಸ್ಸಿ ರುವಾಗ ಗೊತ್ತಾಯಿತು. ದಾವಾ ಸ್ವತ್ತನ್ನು ಆ ಕಾಲಕ್ಕೆ ನೀವು ಖುದ್ದಾಗಿ ಹೋಗಿ ನೋಡಿಲ್ಲದ ಕಾರಣ ನಿಮಗೆ ಗೊತ್ತಿರಲಿಲ್ಲ ಎಂದರೆ ನನಗೆ ಗೊತ್ತಿತ್ತು .

ನೀವು ಬೇರೆ ವಾಸವಿದ್ದೀರಿ ಎಂದರೆ ಸರಿ . ನಾನು ಸುಮಾರು 15 ವರ್ಷಗಳಿಂದ ಬೇರೆ ವಾಸವಿದ್ದೇನೆ . ಆ ಕಾಲದಿಂದಲೂ ಪ್ರತಿವಾದಿ 1 ರಿಂದ 3 ತಮ್ಮ ಕುಟುಂಬದ ಯಾವುದೇ ಸಮಾರಂಭಗಳಿಗೂ ಕರೆಯುವುದಿಲ್ಲ ಎಂದರೆ ಆ ರೀತಿ ಏನು ಇಲ್ಲ ಹೋಗಿ ಬರುತ್ತೇನೆ ಎಂದು ಹೇಳುತ್ತಾರೆ . ವಾದ ಪತ್ರದ ಪ್ಯಾರಾ 5 ರಲ್ಲಿ ಪ್ರತಿವಾದಿಗಳೆಲ್ಲರೂ ಒಟ್ಟಾಗಿ ಸಮಾರಂಭದಲ್ಲಿದ್ದರು ನಾನು ಹೋದಾಗ ನನ್ನನ್ನು ಬಿಟ್ಟು ಸಮಾರಂಭ ಮಾಡಿಕೊಳ್ಳುತ್ತಿದ್ದರು ಎಂದು ಹೇಳಿದ್ದೀರಿ ಎಂದರೆ ಹೌದು . 15 ವರ್ಷಗಳಿಂದ ನಿಮ್ಮದು ಮತ್ತು ಪ್ರತಿವಾದಿಗಳದು ಪ್ರತ್ಯೇಕ ವ್ಯವಹಾರಗಳು ಎಂದರೆ ಸರಿ . ಪ್ರತಿವಾದಿ 1 ರಿಂದ 3 ರವರು ಪ್ರತ್ಯೇಕ ವಾಸವಾಗಿದ್ದಾರೆ

ಎಂದರೆ ನನ್ನ ಮದುವೆಯಾಗುವವರೆಗೂ ಒಟ್ಟಾಗಿ ಇದ್ದೆವು ನನ್ನ ಮದುವೆಯಾದ ನಂತರ ಬೇರೆ ಬಂದಿದ್ದೆ . 15 ವರ್ಷಗಳಿಂದ ಪ್ರತಿವಾದಿ 1 ರಿಂದ 3 ಪ್ರತ್ಯೇಕವಾಗಿ ವಾಸವಾಗಿದ್ದಾರೆ . 15 ವರ್ಷಗಳಿಂದ ನೀವು ಏನೇ ಗಳಿಸಿದರು , ಕಳೆದುಕೊಂಡರು ಅದು ಪ್ರತ್ಯೇಕವಾಗಿ ನಿಮಗೆ ಸೇರಿದ್ದು . ಪ್ರತಿವಾದಿ 1 ರಿಂದ 3 ರವರು 15 ವರ್ಷಗಳಿಂದ ಅವರು ಏನೇ ಗಳಿಸಿದರು, ಕಳೆದುಕೊಂಡರು ಅದು ಪ್ರತ್ಯೇಕವಾಗಿ ಅವರಿಗೆ ಸೇರಿದ್ದು ಎಂದರೆ ಸರಿ .

ದಾವಾ ಸ್ವತ್ತು ಯಾವ ಹಳ್ಳಿಯ ಯಾವ ಸರ್ವೆನಂಬರ್ ನಲ್ಲಿ ಬರುತ್ತದೆ ಎಂದರೆ ಇಟ್ಟಮಡು ಗ್ರಾಮದಲ್ಲಿ ಬರುತ್ತದೆ . ಸರ್ವೆ ನಂಬರ್ ನನಗೆ ಗೊತ್ತಿಲ್ಲ. ದಾವಾ ಸ್ವತ್ತಿನ ಒಟ್ಟು ವಿಸ್ತೀರ್ಣ ನಿಮಗೆ ಗೊತ್ತಿದೆಯೇ ಎಂದರೆ 40 x 15 ಚದರಡಿ . ಇಟ್ಟಮಡು ಗ್ರಾಮದ ಸರ್ವೆ ನಂಬರ್ 40/6 ರಲ್ಲಿ ದಾವಾ ಸ್ವತ್ತು ಇದೆ ಎಂದರೆ ಸರಿ . ಅದೇ ರೀತಿ ಸರ್ವೆ ನಂಬರ್ 40/6 ರ ವಿಸ್ತೀರ್ಣ 40 x 15 ಚದರಡಿ ಅಲ್ಲ ಅದು 3 ಎಕರೆ ಇದೆ ಎಂದರೆ ಗೊತ್ತಿಲ್ಲ ನಾವು ನಮ್ಮ ಸೈಟಿನ ವಿಸ್ತೀರ್ಣ ಹೇಳಿದ್ದೇನೆ . ಈ ದಾವಾ ಸ್ವತ್ತು ಯಾವ ಸರ್ವೆ ನಂಬರ್ ನಲ್ಲಿ ಇದೆ ಎಂದು ನಿಮಗೆ ಗೊತ್ತಿಲ್ಲ ಎಂದರೆ ಸರಿ . ಸರ್ವೆ ನಂಬರ್ 40/6 ರ ಇಟ್ಟಮಡು ಗ್ರಾಮದ ದಾವಾ ಸ್ವತ್ತು ಸೇರಿದಂತೆ 3 ಎಕರೆ ಜಮೀನು ಮೂಲತಃ ಯಾರಿಗೆ ಸೇರಿದ್ದು ಎಂದರೆ ಸುಬ್ರಮಣ್ಯ ನಾಯ್ಡು , ಪ್ರಕಾಶ್ ಮತ್ತು ರಂಗನಾಥ ನಾಯ್ಡು ರವರಿಗೆ ಸೇರಿದ್ದು . ಆ ಜಮೀನು ನೀವು

ಹೇಳಿದವರಿಗೆ ಮೂಲತಃ ಸೇರಿದ್ದಲ್ಲ ಎಂದರೆ ನಮ್ಮ ದಾಖಲೆಯಲ್ಲಿ ಯಾರಿಗೆ ಬಂದಿತ್ತು ಅವರ ಹೆಸರು ಇದೆ ಅದಕ್ಕಿಂತ ಪೂರ್ವದಲ್ಲಿ ಯಾರ ಹೆಸರಿನಲ್ಲಿ ಇತ್ತು ಎಂದು ನನಗೆ ಗೊತ್ತಿಲ್ಲ. ನಿಮಗೆ ಯಾವ ದಾಖಲೆಯ ಆಧಾರದ ಮೇಲೆ ಬಂದಿದೆ ಎಂದರೆ ನನಗೆ ಗೊತ್ತಿಲ್ಲ. ಆ ಸ್ವತ್ತು ಯಾವ ಕಾಲಕ್ಕೂ ನಿಮಗೆ ಬಂದಿಲ್ಲ ಸಂಬಂಧಪಟ್ಟ ಯಾವ ದಾಖಲಾತಿಗಳು ನಿಮ್ಮ ಬಳಿ ಇಲ್ಲ ಎಂದರೆ ಇಲ್ಲ .

ಸರ್ವೆ ನಂಬರ್ 40/6 ರ 3 ಎಕರೆ ಜಮೀನು ಮೂಲತಃ ಸಿದ್ದಯ್ಯರವರ ತಂದೆಗೆ ಸೇರಿದ ಜಮೀನು ಎಂದರೆ ನನಗೆ ಗೊತ್ತಿಲ್ಲ. ಆ ಜಮೀನು ಸಿದ್ದಯ್ಯರವರ ಪಿತ್ರಾರ್ಜಿತ ಸ್ವತ್ತು ಎಂದರೆ ನನಗೆ ಗೊತ್ತಿಲ್ಲ. ಸರ್ವೆ ನಂಬರ್ 40/6 ರ 3 ಎಕರೆ ಜಮೀನನ್ನು ಸಿದ್ದಯ್ಯರವರು ಅವರ ಅಣ್ಣ ತಮ್ಮಂದಿರ ಜೊತೆ ವಿಭಾಗ ಮಾಡಿಕೊಂಡ ನಂತರ ಸಿದ್ದಯ್ಯರವರಿಗೆ 1 ಎಕರೆ 20 ಜಮೀನು ಬಂದಿತ್ತು ಎಂದರೆ ನನಗೆ ಗೊತ್ತಿಲ್ಲ. ಅವರು ತೀರಿಕೊಂಡ ನಂತರ ಆ ಜಮೀನು ಅವರ ಹೆಂಡತಿ ಚಿಕ್ಕಮ್ಮ ಮತ್ತು ಅವರ ಮಕ್ಕಳಿಗೂ ಬಂದಿತ್ತು ಎಂದರೆ ನನಗೆ ಗೊತ್ತಿಲ್ಲ. ಚಿಕ್ಕಮ್ಮ ಮತ್ತು ಅವರ ಮಕ್ಕಳು ಒಟ್ಟಾಗಿ 1975 ರಲ್ಲಿ ಜಿ ವೆಂಕಟಪ್ಪ ರವರಿಗೆ ಮಾರಾಟ ಮಾಡಿದ್ದರು ಎಂದರೆ ನನಗೆ ಗೊತ್ತಿಲ್ಲ. ಜಿ ವೆಂಕಟಪ್ಪರವರು 1976 ರಲ್ಲಿ ಕೆ ಸುಬ್ರಮಣಿ ನಾಯ್ಡು ಮತ್ತು ಟಿ ಪ್ರಕಾಶ್ ರಾವ್ ರವರಿಗೆ 1986 ರಲ್ಲಿ ಕ್ರಯದ ಕರಾರು ಪತ್ರ ಮತ್ತು ಜಿಪಿಎ ಮುಖಾಂತರ ಅವರಿಗೆ ಒಟ್ಟು 3 ಲಕ್ಷ ರೂಪಾಯಿಗೆ ಮಾರಾಟ ಮಾಡಿದ್ದರು ಎಂದರೆ

ಸರಿಯಲ್ಲ. ಕೆ ಸುಬ್ರಮಣಿ ನಾಯ್ಡು ಮತ್ತು ಟಿ ಪ್ರಕಾಶ್ ರಾವ್ ರವರು ಆ ದಿನಕ್ಕೆ ಕ್ರಯದ ಕರಾರಿನ ಪೂರ್ಣ ಮೊಬಲಗು 3 ಲಕ್ಷ ಹಣವನ್ನು ಸಂಪೂರ್ಣವಾಗಿ ಅವರಿಗೆ ನೀಡಿದ್ದರು ಎಂದರೆ ಸರಿಯಲ್ಲ. ಆದಿನ ದಿಂದಲೂ ಕೆ ಸುಬ್ರಮಣಿ ನಾಯ್ಡು ಮತ್ತು ಟಿ ಪ್ರಕಾಶ್ ರಾವ್ ರವರು ಆ ಸ್ವತ್ತಿನ ಸ್ವಾ ಧೀನದಲ್ಲಿದ್ದರು ಎಂದರೆ ಸರಿ .

ಮುಂದುವರೆದ ಪಾಟೀ ಸವಾಲು ಮಾಡಲು ಕಾಲಾವಕಾಶ ಕೋರಿದ್ದರಿಂದ ಕಾಲಾವಕಾಶ ನೀಡಿ ಮುಂದೂಡಲಾಯಿತು.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಗಣಕ ಯಂತ್ರದಲ್ಲಿ ಬೆರಳಚ್ಚು ಮಾಡಿಸಲಾಯಿತು.)

ಓ.ಹೇ.ಕೇ. ಸರಿ ಇದೆ.

(ನಿಶಾ ರಾಣಿ ಎ. ಸಿ)
III ನೇ ಎ.ಸಿ.ಸಿ & ಎಸ್.ಜೆ,
ಬೆಂಗಳೂರು.